<u>ಸಿವಿಲ್ ಜಡ್ಜ ಮತ್ತು ಜೆ. ಎಂ. ಎಫ್. ಸಿ. ನ್ಯಾಯಾಲಯ, ಶಿಗ್ಗಾಂವ</u>

ಪಿ.ಸಿ. ನಂಃ 96 /2021

ಸಿ.ಡಬ್ಲ್ಯೂಃ 1

ಸಾಕ್ಷಿದಾರರ ಹೆಸರುಃ - ಶ್ರೀಮತಿ ಗಿರಿಜವ್ವ ಉರ್ಫ ರೇವತಿ ಕೋಂ ಗೊಂವಿಂದಪ್ಪ । ಪುಟ್ಟಣ್ಣನವರ,

ವಯಸ್ಸು - 29 ವರ್ಷ

ಉದ್ಯೋಗ - ಮನೆಗೆಲಸ

ವಾಸಸ್ಥಳ - ಕಡಹಳ್ಳಿ

ದಿನಾಂಕಃ 06-01-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ -</u> ಶ್ರೀ . ಬಿ.ಕೆ.ಎಂ. ಅರ್ಜಿದಾರ ಪರ ವಕೀಲರಿಂದ

ನಾನು ಸಿದ್ದಪ್ಪ ಪಕ್ಕೀರಪ್ಪ ಜೋಗೆರ, ಪಕ್ಕೀರಪ್ಪ ಜೋಗೆರ, ನಿಂಗಪ್ಪ ಪಕ್ಕೀರಪ್ಪ ಜೋಗೆರ, ಅಶೋಕ ಪಕ್ಕೀರಪ್ಪ ಜೋಗೆರ, ಹಾಗೂ ಬೀರಪ್ಪ ಜೋಗೆರ ಇವರ ವಿರುದ್ಧ ಖಾಸಗಿ ಪಿರ್ಯಾದಿಯನ್ನು ಸಲ್ಲಿಸಿರುತ್ತೇನೆ. ನಾನು ಕಡಹಳ್ಳಿ ಗ್ರಾಮದಲ್ಲಿ ನನ್ನ ಗಂಡ, ಇಬ್ಬರು ಮಕ್ಕಳು, ಅತ್ತೆ ಮಾವ ಇವರ ಜೊತೆ ವಾಸವಾಗಿರುತ್ತೇನೆ. ನನ್ನ ಗಂಡ ಹುಬ್ಬಳ್ಳಿಯಲ್ಲಿ ಜಿ 4 ಎಸ್. ಸೆಕ್ಯೂರ್ ಸೊಲ್ಯೂಶನ್ ಕಂಪನಿಯಲ್ಲಿ ಸೆಕ್ಯೂರಿಟಿ ಗಾರ್ಡ ಅಂತಾ ಕೆಲಸ ಮಾಡುತ್ತಾರೆ. ನಮ್ಮ ಮನೆತನಕ್ಕೆ ಕಡಗಳ್ಳಿ ಗ್ರಾಮದ ಹತ್ತಿರ ಬೆಂಡಿಗೇರಿಯಲ್ಲಿ 2 ಎಕರೆ ಜಮೀನು ಇರುತ್ತದೆ. ನನ್ನ ಗಂಡ ಹುಬ್ಬಳ್ಳಿಯಲ್ಲಿ ಕೆಲಸ ಮಾಡುತ್ತಿರುವುದರಿಂದ ಜಮೀನಿನಲ್ಲಿ ಕೆಲಸ ಮಾಡಲು ಆಗುವುದಿಲ್ಲ ಎಂದು ಹೇಳಿ ಸದರಿ ಜಮೀನನ್ನು 2015 ನೇ ಇಸವಿಯಲ್ಲಿ ಮಾರಾಟ ಮಾಡಿ ಅದರಿಂದ ಬಂದಂತಹ ಹಣವನ್ನು ನಮ್ಮ ಗೃಹ ಉಪಯೋಗಕ್ಕೆಂದು ಮನೆಯಲ್ಲಿ ಇಟ್ಟುಕೊಂಡಿದ್ದೇವು. ನಮಗೆ ಬೇಕಾದವರ ವ್ಯಕ್ತಿಗಳು ಕೈಗಡ ಹಣವನ್ನು ಕೇಳಲು ಬಂದಾಗ ಕೊಡುತ್ತಿದೇವು. ಆರೊಪೀತರು ನಮ್ಮ ಅತ್ತೆಯ ಸಂಬಂದಿಕರಿದ್ದು ಅವರು ಮೊದಲಿಂದಲು ನಮ್ಮ ಮನೆಗೆ ಬಂದು ಹೋಗಿ ಮಾಡುತ್ತಿದ್ದರು.

ನಮ್ಮಿಂದ ಹಣ ಸಹಾಯವನ್ನು ಪಡೆದಕೊಳ್ಳತ್ತಿದ್ದರು. ನನ್ನ ಗಂಡ ಜಮೀನು ಮಾರಾಟ ಮಾಡಿ ಹಣ ಪಡೆದುಕೂಂಡಿರುವ ಬಗ್ಗೆ ತಿಳಿದುಕೊಂಡು ಅವರೆಲ್ಲರೂ ನನ್ನ ಗಂಡನಿಗೆ ಸದರಿ ಹಣವನ್ನು ನಮಗೆ ಕೊಟ್ಟರೆ ನಾವು ಬೇರೆಯರಿಗೆ ಬಡ್ಡಿಯಿಂದ ಹಣವನ್ನು ಕೊಟ್ಟು ಲಾಭ ಪಡೆದುಕೊಳ್ಳುತ್ತೇವೆ ಎಂದು ಹೇಳಿರುತ್ತಾರೆ. ನನ್ನ ಗಂಡನಿಂದ ರೂ. 14,60,000/- ಗಳನ್ನು ಪಡೆದುಕೊಂಡು ಹೋಗಿರುತ್ತಾರೆ. ನನ್ನ ಗಂಡ ಮರಣ ಹೊಂದುವ ನಾಲ್ಕು ವರ್ಷಗಳ ಹಿಂದೆ ಆರೋಪಿತರಿಗೆ ಹಣವನ್ನು ಕೊಟ್ಟಿದ್ದರು. ಸದರಿ ಹಣವನ್ನು ಅವರು ಮರಣ ಹೊಂದುವ ಒಂದು ವರ್ಷಗಳ ಹಿಂದೆ ಆರೋಪಿತರಿಗೆ ಮರುಪಾವತಿ ಮಾಡಿ ಎಂದು ಕೇಳಿಕೊಂಡಿರುತ್ತಾರೆ. ಸದರಿ ಹಣವನ್ನು ಮರುಪಾವತಿ ಮಾಡುತ್ತೇವೆ ಎಂದು ಹೇಳಿ ದಿನಮೇಕ ಮಾಡುತ್ತಾ ಬಂದಿದ್ದು ಇರುತ್ತದೆ. ನನ್ನ ಗಂಡ ಆರೋಪಿತರಿಗೆ ಹಣ ಕೇಳಲು ಹೋದಾಗ ಅವರಿಗೆ ಬೈದು ಹೊಡೆದು ಕಳಿಸಿರುತ್ತಾರೆ. ಆಗ ನಾನು ನಾಲ್ಕು ಜನರನ್ನು ಸೇರಿಸಿ ಆರೋಪಿತರ ಬಳಿ ಹಣ ಮರುಪಾವತಿಸಲು ಕೇಳಿ ಎಂದು ಹೇಳಿರುತ್ತೇನೆ. ಆದರೆ ನನ್ನ ಗಂಡ ಯಾರನ್ನು ಕರೆದುಕೊಂಡು ಹೋಗಿರುವುದಿಲ್ಲ. ನಾನು ಪೆಬ್ರುವರಿ 2021 ರಲ್ಲಿ ಹಾನಗಲ್ ಕೊಪ್ಪರಿಸಿಕೊಪ್ಪ ಇರುವ ನನ್ನ ತವರು ಮನೆಗೆ ಹೋದಾಗ ನನ್ನ ಗಂಡ ಆರೋಪಿತರಿಗೆ ಮತ್ತೆ ಹಣವನ್ನು ಮರು ಪಾವತಿಸಲು ಕೇಳಿಕೊಂಡಿರುತ್ತಾರೆ. ಆದರೆ ಆರೊಪಿತರು ಹಣವನ್ನು ಕೊಡದೆ ನನ್ನ ಗಂಡನಿಗೆ ಬೈದು ಹೊಡೆದು ಜೀವದ ಬೆದರಿಕೆಯನ್ನು ಹಾಕಿರುತ್ತಾರೆ. ಸದರಿ ವಿಷಯವನ್ನು ನನ್ನ ಗಂಡ ನನಗೆ ಪೋನ್ ಮುಖಾಂತರ ತಿಳಿಸಿರುತ್ತಾರೆ. ದಿಃ 28-03- 2021 ರಂದು ಆರೋಪಿತರೆಲ್ಲರೂ ಸೇರಿ ನನ್ನ ಗಂಡನಿಗೆ ಹಣ ಕೇಳಿದರೆ ನಿನ್ನನ್ನು ಸಾಯಿಸುತ್ತೇವೆ ಎಂದು ಹೇಳಿ ಹೊಡಿ ಬಡಿ ಮಾಡಿರುತ್ತಾರೆ. ದಿಃ 30-03-2021 ರಂದು ನನ್ನ ಗಂಡ ಆರೋಪಿತರಿಂದ ಮಾನಸಿಕ ಹಾಗೂ ದೈಹಿಕ ಹಿಂಸೆಗೆ ಒಳಗಾಗಿ ಬೇವಿನಮರಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆಯನ್ನು ಮಾಡಿಕೊಂಡಿರುತ್ತಾರೆ. ಸದರಿ ವಿಷಯವನ್ನು ನನ್ನ ಗಂಡನ ತಂಗಿಯ ಗಂಡನಾದ ರವಿ ಕರಿಲಿಂಗಪ್ಪನವರ ಇವರು ಪೋನ್ ಮಾಡಿ ತಿಳಿಸಿರುತ್ತಾರೆ. ಸದರಿ ವಿಷಯ ತಿಳಿದನಂತರ ನಾನು ನನ್ನ ಗಂಡನ ಮನೆಯಾದ

ಕಡಹಳ್ಳಿ ಗ್ರಾಮಕ್ಕೆ ಹೋಗಿರುತ್ತೇನೆ. ಅಲ್ಲಿ ನನ್ನ ಗಂಡನ ದೇಹವನ್ನು ಶವ ಪರೀಕ್ಷೆಗೆ ತಡಸ ಪ್ರೋಲಿಸ್ ಠಾಣೆ ತೆಗೆದುಕೊಂಡು ಹೋಗಿರುತ್ತಾರೆ ಎಂದು ತಿಳಿಸಿರುತ್ತಾರೆ. ತಡಸ ಪ್ರೋಲೀಸ್ ಠಾಣೆಗೆ ಹೋದಾಗ ನನ್ನ ಗಂಡನ ಮೃತ ದೇಹವನ್ನು ನೋಡಿ ನನಗೆ ಅಪಘಾತ ಆಗಿರುತ್ತದೆ. ಪ್ರೋಲಿಸರು ಶವ ಪರೀಕ್ಷೆಗೆ ನನ್ನ ಸಹಿ ಬೇಕಾಗುತ್ತದೆ ಎಂದು ಹೇಳಿ ನನ್ನ ಸಹಿಯನ್ನು ಪಡೆದುಕೂಂಡಿರುತ್ತಾರೆ. ಪ್ರೋಲೀಸರು ನನ್ನ ಗಂಡನ ಬಳಿ ಇದ್ದ ಪ್ರೋನ್, ಮರಣಪತ್ರ ಹಾಗೂ ಬಟ್ಟೆಗಳನ್ನು ಇಟ್ಟುಕೊಂಡಿದ್ದರು. ಪ್ರೋಲಿಸರಿಗೆ ಎಲ್ಲ ವಿಷಯ ಗೊತ್ತಿದ್ದರೂ ಕೂಡ ಆರೋಪಿತರ ವಿರುದ್ದ ಯಾವುದೇ ಕಾನೂನು ಕ್ರಮ ತೆಗೆದುಕೊಂಡಿರುವುದಿಲ್ಲ ಸದರಿ ವಿಷಯ ನನಗೆ 4 ದಿನಗಳ ನಂತರ ಗೊತ್ತಾಗಿರುತ್ತದೆ. ನನ್ನ ಗಂಡ ನನ್ನ ಅಕ್ಕಳಾದ ಪಕ್ಕೀರಮ್ಮ ಹಾಗೂ ನನ್ನ ಅಣ್ಣನಾದ ಚಂದ್ರಕಾಂತ ಇವರ ಮೊಬೈಲ್ ಪ್ರೋನ್ಗೆ ವಾಟ್ಸ ಅಪ್ ಮುಖಾಂತರ ಮರಣ ಪ್ರಮಾಣ ಪತ್ರವನ್ನು ಕಳುಹಿಸಿರುತ್ತಾರೆ ಈ ವಿಷಯ ತಿಳಿದನಂತರ ಹಾವೇರಿಯ ಎಸ್. ಪಿ. ಕಛೇರಿಯಲ್ಲಿ ದೂರನ್ನು ಸಲ್ಲಿಸಿರುತ್ತೇವೆ. ಮಾರನೇ ದಿನ ತಡಸ ಪ್ರೋಲಿಸ್ ಠಾಣೆಯಲ್ಲಿ ಪಿರ್ಯಾದಿಯನ್ನು ಸಲ್ಲಿಸಿರುತ್ತೇವೆ. ಅವರು ಆರೋತರ ವಿರುದ್ದ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ ಅದಕ್ಕೆ ನಾನು ಮೇಲೆ ಹೇಳಿರುವ 5 ಜನ ಆರೋಪಿತರ ವಿರುದ್ದ ಕಾನೂನು ಕ್ರಮವನ್ನು ತೆಗೆದುಕೊಳ್ಳಿ ಎಂದು ಹೇಳಿ ಖಾಸಗಿ ಪಿರ್ಯಾದಿಯನ್ನು ಸಲ್ಲಿಸಿರುತ್ತೇನೆ.

ಈ ಕೆಳಗಿನಂತೆ ದಾಖಲಾತಿಗಳನ್ನು ಹಾಜರು ಪಡಿಸಿರುತ್ತೇನೆ.

1. ಅ ಸ್ವಾಭಾವಿಕ ಸಾವಿನ ಬಗ್ಗೆ ಮಾಹಿತಿಯ ದೃಡೀಕೃತ ಪತ್ರ ಹಾಜರು ಪಡಿಸಿದ್ದು ಅದನ್ನು ನಿಸಿ-1 ಎಂದು, ಪ್ರೋಲೀಸ್ ಸಬ್ ಇನ್ಸಪೆಕ್ಟರ್ ತಡಸ ಇವರಿಗೆ ನೀಡಿರುವ ದೂರಿನ ದೃಡೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಸಿ-2 ಎಂದು, ಪ್ರೋಲೀಸ್ ವರಿಷ್ಠಾಧಿಕಾರಿಗಳು ಹಾವೇರಿ ಇವರಿಗೆ ಸಲ್ಲಿದ ದೂರಿನ ಸ್ವೀಕೃತಿ ಪ್ರತಿ ಹಾಜರು ಪಡಿಸಿದ್ದು ನಿಸಿ-3 ಎಂದು, ಚ ರಾಸಾಯನಿಕ ಪರೀಕ್ಷೆಯ ವರದಿಯ

ಪಿ.ಸಿ. ನಂಃ 96 /2021
ಸಿ.ಡಬ್ಲ್ಯೂಃ 1

ದೃಡೀಕೃತ ನಕಲು ಹಾಜರು ಪಡಿಸಿದ್ದು ನಿಸಿ-4 ಎಂದು ಗುರುತಿಲಾಯಿತು. ಶವ ಪರೀಕ್ಷಾ ವರಧಿ, ವಾಟ್ಸ್ ಅಪ್ ಮುಖಾಂತರ ಕಳುಹಿರುವ ಮರಣ ಪತ್ರದ ಪ್ರತಿ ಪಿರ್ಯಾಧಿದಾರಳ ಆದಾರ ಕಾರ್ಡ ಹಾಗೂ ಮೃತನ ಆಧಾರ ಕಾರ್ಡ ಹಾಗೂ ಗುರುತಿನ ಚೀಟಿಯ ಜೆರಾಕ್ಸ ಪ್ರತಿಗಳನ್ನ ಹಾಜರು ಪಡಿಸಿರುತ್ತೇನೆ.

ಈ ಹಂತದಲ್ಲಿ ಪಿರ್ಯಾದಿ ದಾರ ಪರ ವಕೀಲರು ಸಮಯ ಕೋರಿದ್ದರಿಂದ ಮುಖ್ಯ ವಿಚಾರಣೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು )

**ಓ ಹೆ ಕೆ ಸರಿ ಅದೆ.**

ಸಹಿ/-06-01-2022
**ಜೆ. ಎಂ. ಎಫ್. ಸಿ., ಶಿಗ್ಗಾಂವ.**